
ಜೀವವೊಂದು ಎಂಬಂತೆ ಇದ್ದುದೂ ನಿಜ; ನಾನು ಆರ್ತಳಾಗಿ ಬೇಡಿಕೊಂಡರೆ ಹೆತ್ತ ಮಗುವನ್ನೂ ಕೊಟ್ಟಾಳು, ಮೇಲಾಗಿ ನನ್ನ ಎಲ್ಲ ಕೆಲಸಕ್ಕೂ ಬೆನ್ನೆಲುಬಾಗಿ ರವಿ ಖಂಡಿತ ನಿಲ್ಲುತ್ತಾನೆ ಎಂದು ಚೆನ್ನಾಗಿ ಬಲ್ಲ ಎದೆಯಲ್ಲೂ ಏನೋ ತೊಳಲಾಟ, ಯಾಕೋ ಒಡಂಬಡದ ಮನಸ್ಸು! ಕೊನೆಗೊಮ್ಮೆ, 'ಅಸಲು ನನ್ನದಲ್ಲದ ಯಾವುದೂ ನನಗೆ ಆನಂದ ನೀಡದು ರವಿ, ನನ್ನದೇ ಜೀವರಸ ಎರಕ ಹೊಯ್ದು ಹೊರಬರುವ ಒಡಲ ಕುಡಿಯೇ ನನಗೆ ಬೇಕು. ಇಲ್ಲವಾದಲ್ಲಿ ನನ್ನ ಕಾವ್ಯಕೂಸುಗಳೇ ನನಗೆ ಸಾಕು' ಎಂದು ಕೊಚ್ಚಿಕೊಂಡಿದ್ದೆ. ಭೌತಶಾಸ್ತ್ರದ ಪ್ರಾಧ್ಯಾಪಕಿಯಾದರೂ ಚಿಕ್ಕ ಪುಟ್ಟ ಕವಿತೆಗಳು ಪ್ರಕಟಗೊಂಡ ಕವಯಿತ್ರಿ ನಾನಲ್ಲವೆ? 'ಅಲ್ಲದೆ ನನ್ನದಲ್ಲದ ಮತ್ತೊಬ್ಬರ ಅಮಾನತ್ತು ಎಂಬ ಭಾವನೆಯಿಂದ ಅಗತ್ಯಕ್ಕಿಂತ ಹೆಚ್ಚು ಮೃದುವಾಗಿ ಯಾವತ್ತೂ ಶಿಕ್ಷಿಸದೆ ಮಗುವನ್ನು ಬೆಳಸಿದೆ ಅಂದುಕೋ, ಆಗ ಜೀವನ ಪ್ರವಾಹದಲ್ಲಿ ಈಜಲು ಅದರ ತೋಳುಗಳಲ್ಲಿ ಧೈರ್ಯ ಬಂದೀತೆ?' ಎಂದು ನುಡಿದಾಗ, 'ಅಬ್ಬಾ! ಎಷ್ಟು ಯೋಚನೆ ಮಾಡುತ್ತೀ ಸುಮಿ, ಜೀವನದಲ್ಲಿ ಸ್ವಲ್ಪ ಸ್ಪಾಂಟೇನಿಟಿ ಬೇಕು. ಎಲ್ಲ ನಿರ್ಧಾರಗಳಿಗೂ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳಿರುತ್ತವೆ. ನಮ್ಮ ನಿರ್ಧಾರ ಎಷ್ಟು ಗಟ್ಟಿ ಎಂಬುದು ಮುಖ್ಯ' ಎಂದು ನಗುತ್ತಾ ತಲೆಗೆ ಮೊಟಕಿದ್ದರೂ ಮುಖವೇಕೋ ಮ್ಲಾನವಾಗಿತ್ತು; ಮುಂದೆ ಈ ವಿಷಯವಾಗಿ ತನ್ನ ಅಭಿಪ್ರಾಯ ಕೊಡುವುದನ್ನು ನಿಲ್ಲಿಸಿದ್ದ ರವಿ.



ಇತ್ತೀಚೆಗೆ ಹತ್ತಾರು ದಿನಗಳಿಂದ ಯಶೋದೆಯ ಸುಳಿವೇ ಇರಲಿಲ್ಲ. ನನಗೂ ಕಾಲೇಜಿನ ಪರೀಕ್ಷೆಯ ಕೆಲಸದಲ್ಲಿ ಅವಳ ಕಡೆ ಹೋಗುವುದಾಗಿರಲಿಲ್ಲ. ನಿನ್ನೆ ದವಾಖಾನೆಯಿಂದ ಬರುವಾಗ ಕಂಡಿದ್ದಳು. ಜ್ವರದಿಂದ ಕೆಂಪಾಗಿ ತಪ್ತನಾಗಿದ್ದ ನಿಂಗನ ತಲೆ ಇಟ್ಟಿದ್ದ ಅವಳ ಭುಜವೂ ಸೋತಂತಿತ್ತು. ಯಾಕೋ ಗಾಬರಿಯೆನಿಸಿ ಹುಬ್ಬಳ್ಳಿಯ ಕೆ.ಎಮ್.ಸಿ.ಯಲ್ಲಿ ಶ್ವಾಸಕೋಶ ತಜ್ಞರಾಗಿದ್ದ ರವಿಯ ಸ್ನೇಹಿತ ಡಾ. ಕುಲಕರ್ಣಿಯವರ ಬಳಿಗೆ ಹೋಗಲು ಗುರುತು ಪತ್ರ ಮತ್ತು ಕೊಂಚ ಹಣವನ್ನೂ ಕೊಟ್ಟು ಕಳುಹಿಸಿದ್ದೆ. ಮಾರನೆ ದಿನ ಸಿದ್ದ ಬಂದು, "ನಿಂಗಣ್ಣನ ದೊಡ್ಡ ದವಾಖಾನಿಗಿ ಒಯ್ದು ಹಾಕೇವ್ರಿ" ಎಂದು ಹೇಳಿ ಹೋದಾಗ ಸ್ವಲ್ಪ ಸಮಾಧಾನ ಎನಿಸಿತ್ತು. ಅದರಲ್ಲಿ ನಿಂಗನ ಬಗೆಗೆ ಸಹಾನುಭೂತಿ ಇತ್ತೋ ಇಲ್ಲ ಯಶೋದೆಗೆ ಇದ್ದ